## 2

ನುಡಿಗಳ ಅಳಿವು ಮತ್ತು ಅವುಗಳ ಅಪಾಯಗಳ ಕುರಿತು ನಾಗರಿಕ ಜಗತ್ತಿಗೆ ತಿಳಿ ಹೇಳಲಾಗುತ್ತಿದೆ. ಇದೊಂದು ಶೈಕ್ಷಣಿಕ ಮತ್ತು ಸಾಮಾಜಿಕ ಆಸಕ್ತಿಯ ವಿಷಯವಾಗಿರುವುದರ ಜೊತೆಗೆ ಜನಪ್ರಿಯ ಮಾಧ್ಯಮಗಳಿಗೂ ತನ್ನ ವ್ಯಾಪ್ತಿಯನ್ನು ಹೆಚ್ಚಿಸಿಕೊಂಡಿದೆ. ಇಂತಹ ನಿಲುವುಗಳನ್ನು ಪ್ರಶ್ನಿಸಲು ಕೇವಲ ಒಪ್ಪಿತ ಮಾದರಿಗಳನ್ನು ಮುನ್ನೆಲೆಗೆ ತರುವುದರಿಂದ ಸಾಧ್ಯವಾಗುವುದಿಲ್ಲ. ನುಡಿ ಅಳಿವನ್ನು ಕುರಿತಂತೆ ಪರ್ಯಾಯ ಚಿಂತನೆಗಳ ವೈಚಾರಿಕ ಬುನಾದಿಯನ್ನು ಬಲಪಡಿಸುವ ಮೂಲಕ ಇದನ್ನು ಸಾಧ್ಯಗೊಳಿಸಬಹುದು. ಅಂದರೆ, ಸಮುದಾಯಗಳು ಮತ್ತು ನುಡಿಗಳ ಪ್ರಾಮುಖ್ಯತೆಯನ್ನು ಕುರಿತು ಚಿಂತಿಸುವ ಬಗೆಯನ್ನು ಹೊಸ ತಾತ್ವಿಕತೆಯಿಂದ ಬದಲಿಸಿಕೊಳ್ಳುವ ಜರೂರಿದೆ. ನುಡಿ ಅಳಿವಿನ ಚರ್ಚೆಗೆ ಹೊಸ ಆಯಾಮಗಳನ್ನು ಕಂಡುಕೊಳ್ಳಬೇಕಿದೆ. ಬಹುತೇಕ ಸನ್ನಿವೇಶದಲ್ಲಿ ಅಪರೂಪದ (ಎಕ್ಸಾಟಿಕ್) ಮಾದರಿಗಳ ಬಗೆಗಿನ ಆಸಕ್ತಿಯ ಮೂಲಕವೇ ಇಂತಹ ಹೊಸತನವನ್ನು ಕಂಡುಕೊಳ್ಳುವ ಉತ್ಸಾಹವನ್ನು ತೋರಿಸಲಾಗುತ್ತದೆ. ಆದರೆ, ಈ ಬಗೆಯ ನಿಲುವುಗಳು ನುಡಿ ಅಳಿವಿನ ಪ್ರಶ್ನೆಯನ್ನು ಎಷ್ಟರಮಟ್ಟಿಗೆ ಸಮುದಾಯಗಳ ಹಿತವನ್ನು ಕಾಪಾಡುವುದಕ್ಕೆ ಮಾನದಂಡಗಳನ್ನಾಗಿ ಬಳಸಿಕೊಳ್ಳಲು ಒತ್ತಾಸೆಯಾಗುತ್ತವೆ ಅನ್ನುವುದು ಮುಖ್ಯ. ಜನರ ಬದುಕು ಮುಖ್ಯವೋ ಅಥವಾ ಕೇವಲ ಅವರ ನುಡಿ ಮುಖ್ಯವೋ ಅನ್ನುವ ಪ್ರಶ್ನೆಯನ್ನು ಕೇಳಿದರೆ, ಬಹುತೇಕರಿಗೆ ಅದು ಮುಖ್ಯವೇ ಅಲ್ಲ. ಏಕೆಂದರೆ, ನುಡಿ ಅಳಿವಿನ ಅಪಾಯಗಳನ್ನು ಚರ್ಚಿಸುವುದಕ್ಕೆ ಮಾತ್ರ ಅವರ ಚಿಂತನೆಗಳು ಸೀಮಿತಗೊಂಡಿರುತ್ತವೆ. ಈ ವಾದವು ಕೆವಿಎನ್ ಅವರು ಬಳಸಿಕೊಂಡಿರುವ ತಾತ್ವಿಕ ಮಾದರಿಗಳ ಮೂಲಕ ನಿಚ್ಚಳಗೊಂಡಿದೆ.

ನುಡಿ ಅಳಿವನ್ನು ಕುರಿತು ಚಿಂತಿಸುವ ಜನಪ್ರಿಯ ಇಲ್ಲವೇ ಒಪ್ಪಿತ ಮಾದರಿಗಳು ಕೆಲವು ನಿರ್ದಿಷ್ಟ ಅಭಿಮತಗಳನ್ನು ಹೊಂದಿರುತ್ತವೆ. ನುಡಿಯೊಂದು ಅಳಿದರೆ, ಆ ನುಡಿಯ ಜೊತೆಗೆ ಈ ಕೆಳ ಕಂಡ ಸಂಗತಿಗಳು ಅಳಿಯುತ್ತವೆ ಅನ್ನುವ ಅಭಿಪ್ರಾಯವೇ ಈ ಅಭಿಮತಗಳ ಪ್ರಬಲವಾದ ನಂಬಿಕೆಯಾಗಿದೆ. ಅಂದರೆ ನುಡಿ ಅಳಿವಿನ ಬಗೆಗೆ ನುಡಿಯರಿಗರು ಚಿಂತಿತರಾಗುವುದಕ್ಕೆ ಅವುಗಳೇ ಮುಖ್ಯ ಕಾರಣವಾಗಿರುತ್ತವೆ.

1. ಮಾನವರ ನುಡಿಗಳ ರಚನೆಯಲ್ಲಿ ಹಲವು ವೈವಿಧ್ಯಗಳಿವೆ.
2. ನುಡಿಗಳು ಅಳಿದರೆ ಕೇವಲ ನುಡಿಗಳಷ್ಟೇ ಅಳಿಯುವುದಿಲ್ಲ. ಅವುಗಳೊಡನೆ – ಒಂದು ವಿಶಿಷ್ಟ ಲೋಕದೃಷ್ಟಿ ಅಳಿಯುತ್ತದೆ. ಆ ನುಡಿಗಳಲ್ಲಿರುವ ಅಪಾರವಾದ ಸಾಂಸ್ಕೃತಿಕ ನೆನಪುಗಳು ಅಳಿಯುತ್ತವೆ. ಆ ನುಡಿಯನ್ನಾಡುತ್ತಿದ್ದ ಜನರು ಹೊಂದಿದ್ದ ತಿಳಿವಳಿಕೆಯೂ ಅಳಿಯುತ್ತದೆ.
3. ಪರಿಸರ ಸಮತೋಲನದ ಬಗೆಗೆ ಚಿಂತಿಸುವವರು ಜೀವ ವೈವಿಧ್ಯ ಮತ್ತು ನುಡಿ ವೈವಿಧ್ಯಗಳಿಗೂ ನಂಟು ಇದೆಯೆಂದು ವಾದಿಸುತ್ತಾರೆ.

ನುಡಿಗಳ ವೈವಿಧ್ಯ ಉಂಟಾಗುವುದಕ್ಕೆ ಇರುವ ಕಾರಣಗಳನ್ನು ಮಾನವಶಾಸ್ತ್ರಜ್ಞರು ಮತ್ತು ಸಮಾಜಶಾಸ್ತ್ರಜ್ಞರು ವಿವರಿಸುತ್ತಾರೆ. ಮಾನವ ಸಮುದಾಯಗಳಲ್ಲಿರುವ 'ಒಳಗೊಳ್ಳದ ಜೀವನ ಕ್ರಮವು' ನುಡಿ ವೈವಿಧ್ಯಕ್ಕೆ ಒಂದು ಮುಖ್ಯ ಕಾರಣವಾಗಿದೆ. ನುಡಿಗಳ ರಚನೆಯ ವೈಶಿಷ್ಟ್ಯಗಳ ತಿಳಿವು ನುಡಿಯರಿಗರಿಗೆ ಏಕೆ ಬೇಕು? ಜಗತ್ತಿನಲ್ಲಿರುವ ನುಡಿಗಳ ರಚನೆಯಲ್ಲಿರುವ ಮಾದರಿಗಳನ್ನು ಹುಡುಕುತ್ತಿರುವ ನುಡಿಯರಿಗರು ಇದ್ದಾರೆ. ಈ ಹುಡುಕಾಟದಿಂದ ನುಡಿಗಳ ಅಂತಸ್ಥ ರಚನೆಯ ಬಗೆಗೆ ನಮ್ಮ ತಿಳಿವಳಿಕೆ ಬದಲಾಗುವ, ಹೆಚ್ಚಾಗುವ ಸಾಧ್ಯತೆಗಳು ಕಡಿಮೆ. ಮಾನವ ನುಡಿಗಳ ವೈವಿಧ್ಯಗಳ ಅಧ್ಯಯನಕ್ಕಾಗಿ ನುಡಿಗಳು ಉಳಿಯಬೇಕೆನ್ನುವ ನಿಲುವಿನ ಹಿಂದೆ ನೈತಿಕ ಒತ್ತಾಯಗಳು ಇರುವಂತೆ ತೋರುವುದಿಲ್ಲ. ನುಡಿಯನ್ನು ಕೇವಲ ಒಂದು ವಸ್ತುವನ್ನಾಗಿ ಮಾತ್ರ ನೋಡಲಾಗುತ್ತದೆ.

ಜೀವ ವೈವಿಧ್ಯ ಮತ್ತು ನುಡಿ ವೈವಿಧ್ಯಗಳು ಗುಣಾತ್ಮಕವಾಗಿ ಬೇರೆ ಬೇರೆ. ಕೇವಲ ನುಡಿಗಳನ್ನು ಕಾಪಿಟ್ಟರೆ ಜೀವ ವೈವಿಧ್ಯ ತನ್ನಿಂದ ತಾನೇ ಉಳಿದುಕೊಳ್ಳಬಲ್ಲದೆಂದು ಹೇಳುವುದು ಕಷ್ಟ. ಏಕೆಂದರೆ, ಅಭಿವೃದ್ಧಿ, ಆಧುನೀಕರಣ ಮತ್ತು ಐಹಿಕಾಭ್ಯುದಯಗಳನ್ನು ಗುರಿಯಾಗಿಸಿಕೊಂಡ ಕಾರ್ಯ ಯೋಜನೆಗಳು ಜೀವವೈವಿಧ್ಯವನ್ನು